ರೊಪ್ಪಕ್ಕೆ ಬಂದು ಮರಿಗಳಿಗೆ ಹಾಲು ಕುಡಿಸುತ್ತಿತ್ತು. ಪಶುಪಾಲನೂ ಅಷ್ಟೆ, ಹುಲಿ ಮರಿಗಳನ್ನು ಕರುಗಳ ಜೊತೆಗೇ ಇಟ್ಟು ರಕ್ಷಿಸುತ್ತಿದ್ದ. ಅವನ ರೊಪ್ಪದಲ್ಲಿ ಹುಲಿಮರಿ ಮತ್ತು ಹಸುವಿನ ಕರುಗಳು ಸ್ನೇಹದಿಂದ ಆಟವಾಡಿಕೊಂಡಿದ್ದವು.

ಹೀಗೇ ನಡೆಯುತ್ತಿರಲು, ಒಂದು ದಿನ ಪಶುಪಾಲಕ ಯಾವುದೋ ಕಾರ್ಯನಿಮಿತ್ತ ತನ್ನ ಸಂಸಾರದ ಜೊತೆಗೂಡಿ ಬೇರೆ ಊರಿಗೆ ಹೋಗಬೇಕಾಯಿತು. ಹುಲಿಮರಿಗಳನ್ನು ಹಾಗೂ ಹಸುವಿನ ಕರುಗಳನ್ನು ಒಟ್ಟಿಗೆ ರೊಪ್ಪದಲ್ಲಿ ಕೂಡಿ ಹಾಕಿದ. ಸಂಜೆಗೆ ಹಸುಗಳು ಮತ್ತು ಹುಲಿ ಬರುವಷ್ಟರಲ್ಲಿ ಹಿಂತಿರುಗಿ ಬರೋಣ ಎಂದು ಹೊರಟ. ಹೇಗಿದ್ದರೂ ಬೇಗ ಬರುತ್ತೇನಲ್ಲ ಎಂದು ಭಾವಿಸಿ ಹುಲಿಗೆ ಈ ವಿಷಯವನ್ನು ತಿಳಿಸಲಿಲ್ಲ.

ಪಶುಪಾಲಕ ಮತ್ತು ಅವನ ಕುಟುಂಬ ಅತ್ತಕಡೆ ಹೊರಟ ಸ್ವಲ್ಪ ಹೊತ್ತಿನಲ್ಲಿ ಮತ್ತೊಂದು ಅನಾಹುತವೇ ನಡೆದು ಹೋಯಿತು. ಪಶುಪಾಲಕನ ಕೆಲವು ಗೆಳೆಯರು ಪೇಟೆಯಿಂದ ಅವನನ್ನು ನೋಡಲು ಬಂದರು. ಪಶುಪಾಲಕನ ಜೊತೆ ಸೇರಿ ತಮ್ಮ ಬಂದೂಕುಗಳ ಮೂಲಕ ಕಾಡು ಪ್ರಾಣಿಗಳನ್ನು ಬೇಟೆ ಆಡುವುದು ಅವರ ಉದ್ದೇಶವಾಗಿತ್ತು. ಹಿಂದೊಮ್ಮೆ ಅವರು ಅದೇ ಉದ್ದೇಶಕ್ಕೆ ಬಂದಿದ್ದಾಗ, ಕಾಡಿನಲ್ಲಿರುವ ತಾನು ತನ್ನ ಸಹವಾಸಿಗಳಾದ ಪ್ರಾಣಿಗಳನ್ನು ಬೇಟೆಯಾಡುವುದಿಲ್ಲ ಎಂದು ವಾಪಸ್ಸು ಕಳಿಸಿದ್ದ. ಆದರೂ ಅವರು ಮತ್ತೊಮ್ಮೆ ಬಂದಿದ್ದರು. ಪಶುಪಾಲನ ಮನೆ ಅಂಗಳಕ್ಕೆ ಬರುತ್ತಿದ್ದಂತೆ ಆಗಂತುಕರ ವಾಸನೆ ಹಿಡಿದ ಹುಲಿಮರಿಗಳು ಗುರುಗುಟ್ಟುತ್ತಾ ಅವನನ್ನೇ ದಿಟ್ಟಿಸಿದ್ದವು. ಪೇಟೆಯ ಆ ಮನುಷ್ಯರಿಗೆ ಹುಲಿಮರಿಗಳನ್ನು ನೋಡಿ ಆಶ್ಚರ್ಯವೂ ಗಾಬರಿಯೂ ಒಟ್ಟಿಗೆ ಆಯಿತು. ಪಶುಪಾಲಕನ ಕರುಗಳನ್ನು ತಿನ್ನಲು ಇವು ಬಂದಿವೆ ಎಂದು ತಪ್ಪಾಗಿ ಭಾವಿಸಿದರು. ಪಶುಪಾಲಕನನ್ನು ಮತ್ತೆ ಮತ್ತೆ ಕೂಗಿದರು. ಪಶುಪಾಲಕನಾಗಲೀ, ಅವನ ಕುಟುಂಬದವರಾಗಲೀ ಮನೆಯಲ್ಲಿ ಇಲ್ಲ ಎಂಬುದು ಮನವರಿಕೆಯಾಯಿತು. ಪಶುಪಾಲಕನ ಕರುಗಳನ್ನು ತಿನ್ನಲು ಬಂದಿರುವ ಈ ಹುಲಿಮರಿಗಳನ್ನು ಜೀವಂತ ಬಿಡಬಾರದು ಎಂದು ತೀರ್ಮಾನಿಸಿದರು. ತಮ್ಮ ಬಂದೂಕುಗಳನ್ನು ಎತ್ತಿ ಗುರಿ ಇಟ್ಟು ನಾಲ್ಕೂ ಹುಲಿ ಮರಿಗಳಿಗೆ ಹೊಡೆದರು. ಹುಲಿ ಮರಿಗಳು ನೋವು ತಾಳಲಾರದೆ ಆರ್ತನಾದ ಮಾಡಿ ಕಾಡಿಗೆ ಕಾಡೇ ಕೇಳಿಸಿಕೊಳ್ಳುವಂತೆ ಕೂಗಿಕೊಂಡವು. ತಮ್ಮ ಅಮ್ಮನನ್ನು ಗೋಳಿಟ್ಟು ಕರೆದವು. ತನ್ನ ಮರಿಗಳ ಈ ಗೋಳಾಟ ಹುಲಿಯ ಕಿವಿಗೂ ಬಿದ್ದಿತು. ತನ್ನ ಪುಟ್ಟ ಕಂದಮ್ಮಗಳಿಗೆ ಏನಾಯಿತೋ ಎತ್ತಾಯಿತೋ ಎಂದು ಗಾಬರಿಯಿಂದ ಹುಲಿ ರೊಪ್ಪದ ಕಡೆ ಅಬ್ಬರಿಸುತ್ತಾ ಗರ್ಜಿಸುತ್ತಾ ಓಡಿತು. ತಾಯಿ ಹುಲಿಯ ಅಬ್ಬರ ಗುಡ್ಡ ಬೆಟ್ಟಗಳನ್ನು ಸೀಳಿಕೊಂಡು ಪ್ರತಿಧ್ವನಿ ಮಾಡಿತು. ಹೆಬ್ಬುಲಿಯ ಗರ್ಜನೆ ಪೇಟೆಯಿಂದ ಬಂದಿದ್ದ ಆ ಬೇಟೆಗಾರರ ಕಿವಿಗೂ ಅಪ್ಪಳಿಸಿತು. ಅದರ ಗರ್ಜನೆಯೇ ಅದೊಂದು ಬಲಿಷ್ಠ ಹೆಬ್ಬುಲಿ ಹಾಗೂ ತಾಯಿ ಹುಲಿ ಎಂಬುದನ್ನು ಸಾಬೀತುಪಡಿಸಿತ್ತು. ಇಲ್ಲಿಗೇ ಬಂದರೆ ತಮ್ಮನ್ನು ಸಿಗಿದು ಹಾಕುತ್ತದೆ ಎಂಬುದು ಬೇಟೆಗಾರರಿಗೆ ಅರಿವಾಯಿತು. ಹುಲಿ ರೊಪ್ಪಕ್ಕೆ ಬರುವಷ್ಟರಲ್ಲಿ ಬೇಟೆಗಾರರು ಓಡೋಡಿ ತಪ್ಪಿಸಿಕೊಂಡರು.

ಹುಲಿ ಬರುವಷ್ಟರಲ್ಲಿ ಅದರ ನಾಲ್ಕು ಮುದ್ದು ಮರಿಗಳೂ ಸತ್ತು ಬಿದ್ದಿದ್ದವು. ಈಗಾಗಲೇ ಒಂದು ಮರಿಯನ್ನು ಕಳೆದುಕೊಂಡಿದ್ದ ಹುಲಿ ತನ್ನ ಇತರೆ ಮರಿಗಳನ್ನು ನೋಡಿ ದುಃಖ ಮರೆತಿತ್ತು. ರೋಷ ದ್ವೇಷವನ್ನೂ ಮರೆತು ಮನುಷ್ಯರ ಸಹವಾಸ ಮಾಡಿತ್ತು. ಆದರೆ, ಈಗ ಆ ನಾಲ್ಕು ಮರಿಗಳೂ ತನ್ನ ಪಾಲಿಗೆ ಇಲ್ಲ. ದ್ವೇಷಗೊಂಡ ಹುಲಿ ಪಶುಪಾಲಕನನ್ನು ಮತ್ತೆ ಮತ್ತೆ ಕೂಗಿ ಕರೆಯಿತು. ಪಶುಪಾಲಕ ಮತ್ತು ಅವನ ಕುಟುಂಬದ ಸುಳಿವೇ ಇಲ್ಲ. ತನ್ನ ಕಂದಮ್ಮಗಳನ್ನು ಕೊಂದು ಅವನು ಓಡಿ ಹೋಗಿದ್ದಾನೆ ಎಂದು ಹುಲಿ ಭಾವಿಸಿತು. ಈ ಮನುಷ್ಯರೇ ಹೀಗೆ, ಕ್ರೂರಿಗಳು, ನಂಬಿಕೆಗೆ ಅರ್ಹರಲ್ಲ ಎಂದು ತೀರ್ಮಾನಿಸಿತು. ಒಂದೇ ಸಮನೆ ಅಬ್ಬರಿಸುತ್ತಾ ಪಶುಪಾಲಕನನ್ನು ಕರೆಯತೊಡಗಿತು.